# ಮುನ್ನುಡಿ

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೌಶಲಗಳು ಹಾಗೂ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ. ಇಂತಹ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಲು ಹಾಗೂ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲು ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಶಿಫಾರಸ್ಸು ಮಾಡಿದೆ. ಇದರನ್ವಯ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮ "ಸಂಭ್ರಮ ಶನಿವಾರ"-ಬ್ಯಾಗ್ ರಹಿತ ದಿನ-ವನ್ನು 2020-21 ನೇ ಸಾಲಿನಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಮಹಾಮಾರಿ ಕೋವಿಡ್ ಸೋಂಕಿನ ಹರಡುವಿಕೆಯಿಂದ ಈ ಕಾರ್ಯಕ್ರಮವನ್ನು 1 ರಿಂದ 8 ನೇ ತರಗತಿ ಮಕ್ಕಳಿಗೆ 2021-2022 ಸಾಲಿನಿಂದ ಅಳವಡಿಸಲಾಗುವುದು.

ಸಂಭ್ರಮ ಶನಿವಾರದಂದು ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ 10 ವಿಷಯಗಳಲ್ಲಿ ಮಕ್ಕಳಿಗಾಗಿ ವಿದ್ಯಾರ್ಥಿ ಕೈಪಿಡಿಗಳನ್ನು ಹಾಗೂ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಹೇಗೆ ಅಳವಡಿಸಬೇಕು ಎಂಬ ಮಾರ್ಗಸೂಚಿಗಳನ್ನೊಳಗೊಂಡ ಶಿಕ್ಷಕರ ಕೈಪಿಡಿಯನ್ನು ಶಿಕ್ಷಕರಿಂದಲೇ ರಚಿಸಲ್ಪಟ್ಟಿದೆ. ವಿದ್ಯಾರ್ಥಿ ಕೈಪಿಡಿಯಲ್ಲಿ ವಿಷಯವನ್ನು ಆಳವಾಗಿ ಅರ್ಥೈಸಲು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳಲ್ಲಿ ವಿದ್ಯಾರ್ಥಿಗಳೇ ಸ್ವತಂತ್ರವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ನೀಡಿದೆ. ಕಾರ್ಯಕ್ರಮ ಪ್ರಾರಂಭಿಸುವ ಮುನ್ನ ಶಿಕ್ಷಕರು ಶಿಕ್ಷಕರ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿ ಕೈಪಿಡಿಗಳು ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ಸಹಕರಿಸಿದ ಅಜೀಂ ಪ್ರೇಂ ಜೀ ಫೌಂಡೇಶನ್, ಗ್ರ್ಯಾಮ್ ಸಂಸ್ಥೆ, ಮೈಸೂರು, ಉದ್ಯಮ್ ಫೌಂಡೇಶನ್ ಹಾಗೂ ಡ್ರೀಮ್ ಎ ಡ್ರೀಮ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ

## ಆಧುನಿಕ ತಂತ್ರಜ್ಞಾನ ಸಾಧನಗಳು ಮತ್ತು ಅಂತರ್ಜಾಲದ ಸುರಕ್ಷಿತ ಬಳಕೆ


| | | | ಶೀರ್ಷಿಕೆ | ಪು.ಸಂಖ್ಯೆ |
|---|---|---|---|---|
| | ಪೀಠಿಕೆ | | | 2–4 |
| 1 – 3 | ಅರಿವು | : | ನೀವೇನು ಬಲ್ಲಿರಿ ?! | 5–6 |
| 1 – 3 | ಅನುಭವ | : | ನದಿ–ದಡ ಆಟ ಆಡೋಣ ಬನ್ನಿ | 7–8 |
| 1 – 3 | ಅವಲೋಕನ | : | ಬನ್ನಿ ಚಿತ್ರ ಬಿಡಿಸೋಣ ! | 8 |
| 4 – 5 | ಅರಿವು | : | ನೋಡಿದ್ದು ಸುಳ್ಳಾಗಬಹುದು–ಕೇಳಿದ್ದು ಸುಳ್ಳಾಗಬಹುದು ನಿಧಾನಿಸಿ ಯೋಚಿಸಿದಾಗ ನಿಜವು ತಿಳಿವುದು | 9 |
| 4 – 5 | ಅನುಭವ | : | ಹಾವು ಮತ್ತು ಏಣಿ ಆಟ ಆಡೋಣವೇ ?! | 10 |
| 4 – 5 | ಅವಲೋಕನ | : | ಬನ್ನಿ ಚಿತ್ರ ಬಿಡಿಸೋಣ ! | 11 |
| 6 – 8 | ಅರಿವು | : | ನಮ್ಮ ಜಾಣ್ಮೆಯಲ್ಲಿದೆ ನಮ್ಮ ಸುಂದರ ಜೀವನ | 12–13 |
| 6 – 8 | ಅನುಭವ | : | ನಟಿಸು – ಕಲಿ | 14–16 |
| 6 – 8 | ಅವಲೋಕನ | : | ಆ ಸಂದರ್ಭದಲ್ಲಿ ನಾನಿದ್ದರೆ !!! ಅಥವಾ | 17–18 |
| | | | ನೀ ನನ್ನ ಗೆಲ್ಲಲಾರೆ !!! | 19 |
| | ಪ್ರತಿಜ್ಞೆ | | | 20 |
| | ಸಲಹಾತ್ಮಕ ಚಟುವಟಿಕೆಗಳು | | | 20 |




'ಎಂದಿಗೂ ತಪ್ಪು ಮಾಡಿಲ್ಲದವರು ಯಾವುದೇ ಹೊಸ ಪ್ರಯತ್ನ ಮಾಡಿರಲಾರರು' – ಆಲ್ಬರ್ಟ್ ಐನ್‌ಸ್ಟೈನ್

## ಹಿನ್ನೆಲೆ :

ಇಂದಿನ ಆಧುನಿಕ ಯುಗದಲ್ಲಿ ಯಾವುದೇ ವಿಷಯದ ಬಗ್ಗೆ ಮಾಹಿತಿಯನ್ನು ಪಡೆಯುವುದು ನಮ್ಮ ಬೆರಳತುದಿಯಲ್ಲಿದೆ. ಜ್ಞಾನವು ಅಗಾಧವಾಗಿ ಎಲ್ಲೆಡೆ ಹರಡಿಕೊಂಡಿದೆ. ಸ್ಮಾರ್ಟ್‌ಫೋನ್‌ಗಳು ಕೈಗೆಟಕುವ ಬೆಲೆಯಲ್ಲಿ ಲಭ್ಯವಿದ್ದು ಸಾಮಾನ್ಯವಾಗಿ ಮನೆಯ ಎಲ್ಲಾ ರೀತಿಯ ಕೆಲಸಗಳಿಗೆ ಬಳಕೆಯಾಗುತ್ತಿವೆ. ಈಗಿನ ಯುಗದಲ್ಲಿ ದಿನಪತ್ರಿಕೆಗಳು, ಪುಸ್ತಕಗಳು ಮಾತ್ರ ಜ್ಞಾನಾರ್ಜನೆಯ ಮುಖ್ಯ ಮೂಲಗಳಾಗಿ ಉಳಿದಿಲ್ಲ ಮತ್ತು ಮಾಹಿತಿಯ ಲಭ್ಯತೆಯು ಬಹುಮೂಲಗಳ ಮೂಲಕ ಲಭ್ಯವಿದ್ದು ಅಂತರ್ಜಾಲ, ಸಾಮಾಜಿಕ ಜಾಲತಾಣ, ದೂರದರ್ಶನ ಮತ್ತು ಇತರೆ ತಂತ್ರಜ್ಞಾನ ವೇದಿಕೆಗಳ ಮೂಲಕ ಬಹುಬೇಗ ಹರಡುತ್ತಿದೆ.

ಟಿ.ವಿ. ಫೋನ್, ಕಂಪ್ಯೂಟರ್, ಲ್ಯಾಪ್‌ಟಾಪ್ ಇತ್ಯಾದಿ, ಇವುಗಳಲ್ಲಿ ಕಾಣಸಿಗುವ ಸಾಮಾಜಿಕ ಜಾಲತಾಣಗಳಾದ ವಾಟ್ಸಪ್, ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಯೂ–ಟ್ಯೂಬ್, ಗೂಗಲ್–ಗೇಮ್ಸ್ ಇತ್ಯಾದಿಗಳು ಮನರಂಜನೆಯ ಮೂಲಗಳಾಗಿದ್ದು ವ್ಯಕ್ತಿಗೆ ಅಗತ್ಯವಾದ ಮತ್ತು ಅನಗತ್ಯವಾದ ಎಲ್ಲಾ ಮಾಹಿತಿಗಳನ್ನು ಎಲ್ಲಾ ವಯೋಮಾನದವರಿಗೂ ಸಿಗುವಂತೆ ಮಾಡುತ್ತವೆ.

ಮತ್ತೊಂದೆಡೆ ಈ ಮಾಧ್ಯಮಗಳು ಉಪಯೋಗಿಸುವ ವ್ಯಕ್ತಿಯ ವೈಯಕ್ತಿಕ ಮಾಹಿತಿಯು ಎಲ್ಲರಿಗೂ ತಿಳಿಯುವ ಹಾಗೆ ಮಾಡುತ್ತಿವೆ. ಮಕ್ಕಳಿಗೆ ಈ ಮಾಹಿತಿಯು ಸಾಮಾಜಿಕ ಜಾಲತಾಣ ಮತ್ತು ಸ್ಮಾರ್ಟ್‌ಫೋನ್‌ಗಳಿಗೆ ಪೂರ್ವ ಪ್ರವೇಶವನ್ನು ಹೊಂದಿರುವುದರಿಂದ ಅವರಲ್ಲಿ ತಂತ್ರಜ್ಞಾನದ ಸುರಕ್ಷಿತ ಬಳಕೆಯ ಅರಿವನ್ನು ಖಚಿತಪಡಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಈ ಸಾಹಿತ್ಯವು ಮಕ್ಕಳಲ್ಲಿ ತಂತ್ರಜ್ಞಾನ ಬಳಕೆಯ ಉಪಯೋಗಗಳು ಮತ್ತು ಅದರಿಂದಾಗುವ ದುಷ್ಪರಿಣಾಮಗಳನ್ನು ಅರ್ಥೈಸಿಕೊಳ್ಳುವಲ್ಲಿ ಸಹಕಾರಿಯಾಗಿದೆ. ಇದು ವಿದ್ಯಾರ್ಥಿಗಳಲ್ಲಿ ತಂತ್ರಜ್ಞಾನ ಸಕ್ರಿಯಗೊಳಿಸಿದ ವೇದಿಕೆಗಳನ್ನು ಜವಾಬ್ದಾರಿಯುತವಾಗಿ ಬಳಕೆ ಮಾಡುವ ಅಗತ್ಯವನ್ನು ಅರ್ಥಮಾಡಿಕೊಳ್ಳುವಂತೆ ಮಾಡುತ್ತದೆ.

ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಸಾಧಿಸಬೇಕಾದ ಕೆಲವು ನಿರ್ದಿಷ್ಟ ಉದ್ದೇಶಗಳು ಮತ್ತು ಕಲಿಕೆಯ ಫಲಿತಾಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಮಾಡ್ಯೂಲ್ ಅನ್ನು ವಿನ್ಯಾಸಗೊಳಿಸಲಾಗಿದೆ. ಸಂಭ್ರಮ ಶನಿವಾರದ ಪ್ರತಿಯೊಂದು ವಿಷಯವನ್ನು ಆಳವಾಗಿ ಅರಿತು ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಮಾಡ್ಯೂಲ್ ಅನ್ನು ಕೆಳಕಂಡಂತೆ ಮೂರು ಘಟಕಗಳಾಗಿ ವಿಂಗಡಿಸಲಾಗಿದೆ.

1) ಅರಿವು

2) ಅನುಭವ

3) ಅವಲೋಕನ/ಪ್ರತಿಫಲನ

ಈ ಮೂರು ಘಟಕಗಳು ಮಕ್ಕಳಿಗೆ ಬ್ಯಾಗ್‌ರಹಿತ ದಿನ ಎಂಬ ಪರಿಕಲ್ಪನೆಯ ಪ್ರತಿಯೊಂದು ಘಟಕವನ್ನು ಆಳವಾಗಿ ಅರಿಯುವುದರ ಜೊತೆಗೆ ಅದರೊಡನೆ ತೊಡಗಿಸಿಕೊಳ್ಳಲು ಅವಕಾಶ ನೀಡುತ್ತವೆ.

ಇದು ಮಕ್ಕಳಿಗಾಗಿಯೇ ಆಯೋಜಿಸಲ್ಪಟ್ಟ ಕಾರ್ಯಕ್ರಮವಾಗಿದ್ದು ಮಕ್ಕಳೇ ಈ ಕೈಪಿಡಿಯನ್ನು ಜಾರಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆ ಸಂರಚಿಸಲಾಗಿದೆ. ಇದರಲ್ಲಿ ಕೆಲವು ಹಿರಿಯ ವಿದ್ಯಾರ್ಥಿಗಳು ನೇತೃತ್ವ ವಹಿಸುವಂತೆ ಪ್ರೇರೇಪಿಸಬೇಕು. ಮಕ್ಕಳು ಸಕ್ರಿಯವಾಗಿ ಭಾಗವಹಿಸಿ, ಈ ಮಾಡ್ಯೂಲ್ ಅನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿ ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಒತ್ತಾಸೆ ಹಾಗೂ ಮಾರ್ಗದರ್ಶನ ನೀಡುವುದು;

- ಎಲ್ಲಾ ಮಕ್ಕಳು ಆಯಾ ಹಂತಗಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಚಟುವಟಿಕೆಗಳಿಂದ ಯಾವ ವಿದ್ಯಾರ್ಥಿಯೂ ಹೊರ ಉಳಿಯದಂತೆ ಅಥವಾ ಒಂದೇ ವಿದ್ಯಾರ್ಥಿ ಪುನರಾವರ್ತನೆ ಆಗದಂತೆ ಪ್ರತಿ ಬಾರಿ ವಿವಿಧ ವಿದ್ಯಾರ್ಥಿಗಳು ಚಟುವಟಿಕೆಗಳ ನೇತೃತ್ವ ವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳು ಚಟುವಟಿಕೆ ಕೈಗೊಳ್ಳುವಾಗ ಪೂರ್ಣ ಸ್ವಾತಂತ್ರ್ಯ ನೀಡುವುದು ಹಾಗೂ ಅವಶ್ಯಕತೆ ಇದ್ದಾಗ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ನಿರೂಪಿಸುತ್ತಿರುವ ವಿದ್ಯಾರ್ಥಿಗಳು ಅಪೇಕ್ಷೆಪಟ್ಟಾಗ ಮಾತ್ರ ಮಾರ್ಗದರ್ಶಿಸುವುದು, ಇಲ್ಲವಾದಲ್ಲಿ ಶಿಕ್ಷಕರು ಮಧ್ಯೆ ಪ್ರವೇಶಿಸಬಾರದು.
- ಅನೇಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ನಾಯಕ/ ನಿರೂಪಕರು ಚರ್ಚೆಗಳ ಸಾರಾಂಶವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಬೇಕಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಅವರಿಗೆ ಹೆಚ್ಚಿನ ಮಾರ್ಗದರ್ಶನ ನೀಡುವುದು.
- ಶಾಲೆ ಅಥವಾ ತರಗತಿಗಳಲ್ಲಿ ಚರ್ಚೆ ಮತ್ತು ಕ್ರೀಡಾ ಪ್ರದರ್ಶನಗಳಿಗಾಗಿ ಪ್ರತ್ಯೇಕ ಸ್ಥಳಗಳನ್ನು ಗುರ್ತಿಸಿ ಅವಕಾಶ ಕಲ್ಪಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸುವ ಮುನ್ನ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಇತರೆ ವಸ್ತುಗಳು ಲಭ್ಯವಾಗಿವೆಯೇ ಎಂದು ಖಚಿತ ಪಡಿಸಿಕೊಳ್ಳುವುದು.
- ಗುಂಪುಗಳನ್ನು ಮಾಡುವಾಗ ಬಾಲಕ ಮತ್ತು ಬಾಲಕಿಯರಿಗೆ ಸಮಾನ ಅವಕಾಶಗಳು ದೊರೆಯುವಂತೆ ಮುತುವರ್ಜಿ ವಹಿಸುವುದು.
- ಬ್ಯಾಗ್ ರಹಿತ ದಿನದ ಉದ್ದೇಶಗಳಿಗನುಗುಣವಾಗಿ ಕೊಂಚವೂ ಉತ್ಸಾಹ ಕಡಿಮೆಯಾಗದ ಹಾಗೆ ಚಟುವಟಿಕೆಗಳನ್ನು ನಿರ್ವಹಿಸುವಾಗ ಸಂತಸವಾದ ವಾತಾವರಣವಿರುವುದನ್ನು ಖಚಿತಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳನ್ನು ನಾಳಿನ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಂತಹ ಮಹತ್ತರ ಉದ್ದೇಶವನ್ನು ಹೊಂದಿರುವ ಬ್ಯಾಗ್ ರಹಿತ ದಿನದ ಆಚರಣೆ ಅರ್ಥಪೂರ್ಣವಾಗುವಂತೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.

## ಒಂದು ದಿನ ಶಾಂತಳ ಮನೆಯಲ್ಲಿ ....



ಶಾಂತಾ ಏಳನೇ ತರಗತಿಯಲ್ಲಿ ಓದುತ್ತಿರುವ ಹುಡುಗಿ, ಅವಳಿಗೆ ಒಬ್ಬ ತಮ್ಮ ಇರುತ್ತಾನೆ, ಅವನ ಹೆಸರು ಮಣಿಕಂಠ, ಅವನು ಎರಡನೇ ತರಗತಿಯಲ್ಲಿ ಓದುತ್ತಿರುತ್ತಾನೆ. ಒಂದು ದಿನ ಶಾಂತಾ ಅಪ್ಪನ ಫೋನ್ ತೆಗೆದುಕೊಂಡು ಅದರಲ್ಲಿ ಯು–ಟ್ಯೂಬ್‌ನಲ್ಲಿ ಹಾಡನ್ನು ಕೇಳುತ್ತಿರುತ್ತಾಳೆ, ಮಣಿಕಂಠ ಕೂಡ ಅವಳ ಜೊತೆ ಮೊಬೈಲ್ ನೋಡುತ್ತಿರುತ್ತಾನೆ. ನೀರು ತರಲು ಹೊರಗೆ ಹೋಗಿದ್ದ ಶಾಂತಾಳ ತಾಯಿ ಮನೆಗೆ ಬಂದು ನೋಡಿದಾಗ ಮಕ್ಕಳಿಬ್ಬರೂ ಫೋನ್‌ನಲ್ಲಿ ಹಾಡನ್ನು ವೀಕ್ಷಿಸುತ್ತಿರುವುದು ಕಾಣಿಸುತ್ತದೆ. ಇದರಿಂದ ಶಾಂತಾಳ ತಾಯಿಗೆ ಬಹಳ ಕೋಪ ಬರುತ್ತದೆ. ಆಗ ಅವಳು "ಶಾಂತಾ ಏನು ಮಾಡುತ್ತಿದ್ದೀಯಾ? ಫೋನ್‌ನಲ್ಲಿ ನಿನಗೆ ಹಾಡು ಕೇಳಲು ಯಾರು ಹೇಳಿದ್ದು? ನಿನಗೆ ಫೋನ್ ಏತಕ್ಕೆ ಬಳಸಬೇಕು ಎಂದು ನಾನು ಹೇಳಿದ್ದೇನೆ ? ನೋಡು ನಿನ್ನ ಜೊತೆಗೆ ನಿನ್ನ ತಮ್ಮನೂ ಕುಳಿತಿದ್ದಾನೆ, ಅವನ ಕಣ್ಣು ಹಾಳಾಗುವುದಿಲ್ಲವೇ?" ಎಂದು ಜೋರಾಗಿ ಬಯ್ಯುತ್ತಾಳೆ. ಇದನ್ನು ಕೇಳಿ ಶಾಂತಾಳಿಗೆ ಅಳು ಬರುತ್ತದೆ. ಅವಳು ಅಳಲು ಪ್ರಾರಂಭಿಸುತ್ತಾಳೆ. ಶಾಂತಾ ಅಳುವುದನ್ನು ನೋಡಿ ಮಣಿಕಂಠನೂ ಅಳುತ್ತಾನೆ. ಮಕ್ಕಳಿಬ್ಬರು ಅಳುವುದನ್ನು ನೋಡಿ ಶಾಂತಾಳ ತಾಯಿಗೆ ಕೋಪ ಕಡಿಮೆಯಾಗಿ ಅವರಿಬ್ಬರನ್ನು ಸಮಾಧಾನ ಮಾಡುತ್ತಾಳೆ.

**ಯೋಚಿಸಿ :**

1. ನಿಮಗೆ ಎಂದಾದರೂ ಈ ಅನುಭವ ಆಗಿದೆಯೇ ?
2. ಶಾಂತ ಏನಾದರೂ ತಪ್ಪು ಮಾಡಿದಳೇ?
3. ಶಾಂತಾಳ ತಾಯಿಗೆ ಏಕೆ ಕೋಪ ಬಂದಿತು ?

**ಹೌದು ಎಂದಾದರೆ ;**

ಬನ್ನಿ ಇವುಗಳ ಬಳಕೆ ಹೇಗೆ ಮಾಡಬೇಕು ಎಂದು ಅರಿಯೋಣ!!!

ಅರಿವು/ತಿಳುವಳಿಕೆ :

ತರಗತಿ 1–3 : (60 ನಿಮಿಷಗಳು)

# ನೀವೇನು ಬಲ್ಲಿರಿ ?!



1. ನೀವು ಮೊಬೈಲ್ ಬಳಸುವಿರಾ?
2. ನೀವು ಮೊಬೈಲ್ ಯಾವ ಕೆಲಸಗಳಿಗೆ ಬಳಸುವಿರಿ?
3. ನೀವು ಮೊಬೈಲ್ ನಲ್ಲಿ ಏನು ನೋಡುವಿರಿ?
4. ಹೆಚ್ಚು ಕಾಲ ಮೊಬೈಲ್ ಬಳಕೆ ಮಾಡಿದಾಗ ನಿಮ್ಮ ಕಣ್ಣಿಗೆ ಹೇಗೆನಿಸುತ್ತದೆ?




1. ಈ ಚಿತ್ರದಲ್ಲಿ ಏನನ್ನು ಕಾಣುತ್ತೀರಾ?
2. ನೀವು ಇವುಗಳ ಬಳಕೆ ಮಾಡುತ್ತೀರಾ?
3. ಹಾಗಿದ್ದರೆ ಏಕೆ?
4. ಯುಟ್ಯೂಬ್‌ನಲ್ಲಿ ಏನನ್ನು ನೊಡುತ್ತೀರಾ?



1. ನೀವು ದಿನದಲ್ಲಿ ಎಷ್ಟು ಹೊತ್ತು ಟಿ.ವಿ. ನೋಡುತ್ತೀರಿ ?
2. ನೀವು ಇಷ್ಟಪಟ್ಟು ನೋಡುವ ಕಾರ್ಯಕ್ರಮಗಳಾವುವು ?
3. ನೀವು ಓದುವ ಸಮಯದಲ್ಲಿ ಟಿ.ವಿ. ಹಾಕಿದರೆ ನಿಮಗೆ ಹೇಗೆನಿಸುತ್ತದೆ?
4. ಟಿ.ವಿ. ನೋಡುವುದರಿಂದ ನೀವು ಯಾವ ಯಾವ ವಿಷಯಗಳನ್ನು ಕಲಿತಿದ್ದೀರಿ?



'ತಿಳಿಯಬೇಕಾದದ್ದು ಸಮುದ್ರದಷ್ಟು, ತಿಳಿದಿರುವುದು ಹನಿಯಷ್ಟು' – ಚೀನಿ

1. ಈ ಚಿತ್ರದಲ್ಲಿ ನೀವು ಏನನ್ನು ಕಾಣುತ್ತೀರ?
2. ನಿಮಗೆ ಇಷ್ಟವಾದ ಜಾಹಿರಾತು ಯಾವುದು? ಏಕೆ?
3. ನೀವು ಎಲ್ಲೆಲ್ಲಿ ಜಾಹಿರಾತುಗಳನ್ನು ನೋಡುತ್ತೀರಾ?
4. ಯಾವ ಯಾವ ಜಾಹಿರಾತುಗಳನ್ನು ನೋಡಿದ್ದೀರಾ ?





1. ನೀವು ನಿಮ್ಮ ಬಿಡುವಿನ ಸಮಯವನ್ನು ಹೇಗೆ ಕಳೆಯುತ್ತೀರಿ?
2. ದಿನದಲ್ಲಿ ಎಷ್ಟು ಹೊತ್ತು ನೀವು ಆಟ ಆಡುತ್ತೀರಾ?
3. ಈ ಎರಡು ಚಟುವಟಿಕೆಗಳಲ್ಲಿ ನಿಮಗೆ ಯಾವುದು ಇಷ್ಟ?
4. ಈ ಎರಡು ಚಿತ್ರಗಳಲ್ಲಿನ ಮಕ್ಕಳಲ್ಲಿ ಯಾರು ಹೆಚ್ಚು ಆರೋಗ್ಯವಂತರಾಗಿರುತ್ತಾರೆ?

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ತಂಡಗಳಾಗಿ ವಿಂಗಡಿಸಿ ಪ್ರತ್ಯೇಕವಾಗಿ ಕುಳಿತುಕೊಳ್ಳಲು ತಿಳಿಸಿ.
- ಪ್ರತಿಯೊಂದು ಗುಂಪಿಗೆ ಒಂದು ಮಿಂಚುಪಟ್ಟಿಯನ್ನು ನೀಡಿ.
- ವಿಧ್ಯಾರ್ಥಿಗಳು ತಮಗೆ ನೀಡಿರುವ ಮಿಂಚುಪಟ್ಟಿಯ ಬಗ್ಗೆ ಚರ್ಚಿಸಲು 5–10 ನಿಮಿಷ ಸಮಯ ನೀಡಿ.
- ಪ್ರತಿಯೊಂದು ಗುಂಪಿಗೆ ಅವರು ಪಡೆದ ಮಿಂಚುಪಟ್ಟಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ.
- ಆ ಪ್ರಶ್ನೆಗಳಿಗೆ ಗುಂಪಿನ ಸದಸ್ಯರು ಮೊದಲು ಉತ್ತರಿಸಬೇಕು, ನಂತರ ಇತರೆ ಗುಂಪಿನ ಸದಸ್ಯರು ಆ ಮಿಂಚುಪಟ್ಟಿಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು.
- ಅನಿಸಿಕೆಗಳನ್ನು ಎಲ್ಲಾ ವಿದ್ಯಾರ್ಥಿಗಳು ಹಂಚಿಕೊಂಡ ನಂತರ ಈ ಕೆಳಗಿನ ರೀತಿಯ ಪ್ರಶ್ನೆಗಳನ್ನು ಕೇಳುವುದರ ಮೂಲಕ ಕಲಿಕೆಯನ್ನು ಸಾರಾಂಶಿಸುವುದು.

**ಪ್ರಶ್ನೆಗಳು :**

- ಮೊಬೈಲ್ ಅನ್ನು ಯಾವ ಕೆಲಸಕ್ಕೆ ಬಳಸಬೇಕು ಮತ್ತು ಯಾವ ಕೆಲಸಕ್ಕೆ ಬಳಸಬಾರದು?
- ಜಾಹಿರಾತಿನಲ್ಲಿ ತೋರಿಸಿರುವ ಪೌಷ್ಠಿಕ ಪೇಯಗಳನ್ನು ಕುಡಿಯುವ ಮಕ್ಕಳೆಲ್ಲಾ ಬೆಳೆಯುತ್ತಾರೆಯೇ?
- ಹೆಚ್ಚು ಟಿ.ವಿ. ನೋಡುವುದರಿಂದ ಏನಾಗುತ್ತದೆ ?
- ನೀವು ನಿಮ್ಮ ಬಿಡುವಿನ ಸಮಯವನ್ನು ಹೇಗೆ ಕಳೆದರೆ ಉತ್ತಮ?

**ಅನುಭವ :**

**ತರಗತಿ 1–3 :** **ನದಿ – ದಡ ಆಟ ಆಡೋಣ ಬನ್ನಿ** **(30 ನಿಮಿಷಗಳು)**



**ನಿರೂಪಕರಿಗೆ /ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

1. ಮೈದಾನದಲ್ಲಿ ಮಕ್ಕಳ ಸಂಖ್ಯೆಗಳಿಗೆ ಅನುಗುಣವಾಗಿ ಎಲ್ಲಾ ಮಕ್ಕಳು ವೃತ್ತಾಕಾರದಲ್ಲಿ ನಿಲ್ಲುವಂತೆ ವೃತ್ತವನ್ನು ಎಳೆದು ವೃತ್ತದ ಒಳಭಾಗದಲ್ಲಿ ನದಿ ಮತ್ತು ಹೊರಭಾಗದಲ್ಲಿ ದಡ ಎಂದು ಬರೆಯುವುದು.
2. ಆಟದಲ್ಲಿ ನದಿಯು ತಂತ್ರಜ್ಞಾನ ಸಾಧನಗಳ ಋಣಾತ್ಮಕ ಪ್ರಭಾವ ಮತ್ತು ದಡವು ತಂತ್ರಜ್ಞಾನ ಸಾಧನಗಳ ಧನಾತ್ಮಕ ಪ್ರಭಾವವನ್ನು ಸೂಚಿಸುತ್ತದೆ ಎಂದು ಮಕ್ಕಳಿಗೆ ತಿಳಿಸುವುದು.
3. ಎಲ್ಲಾ ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ.
4. ವಿದ್ಯಾರ್ಥಿ ನಾಯಕರು ಒಂದು ವಾಕ್ಯ ಹೇಳುವುದು
   ಉದಾಹರಣೆ : ಯಾವಾಗಲೂ ಮೊಬೈಲ್‌ನಲ್ಲಿ ಆಟ ಆಡುವುದು.
   ಈ ಕಾರ್ಯ 'ಸರಿ' ಎನ್ನುವವರು ದಡದಲ್ಲಿರಲಿ ಮತ್ತು 'ತಪ್ಪು' ಎನ್ನುವವರು ಕೆಳಗೆ ಇಳಿಯಬೇಕು.
   ಈ ವಾಕ್ಯಕ್ಕೆ ಸಂಬಂಧಿಸಿದಂತೆ ಚರ್ಚೆ ಮಾಡುವಂತೆ ಪ್ರೇರೇಪಿಸುವುದು.

**ಆಯ್ಕೆ ಮಾಡಿಕೊಳ್ಳಬಹುದಾದ ಕೆಲವು ವಾಕ್ಯಗಳು :**

1. ಯೂ–ಟ್ಯೂಬ್‌ನಲ್ಲಿ ಫಿಲ್ಮ್ ನೋಡುವುದು.
2. ಇಂಟರ್ನೆಟ್‌ನಿಂದ ಶಾಲಾ ಪ್ರಾಜೆಕ್ಟ್ ಮಾಡಲು ಚಿತ್ರಗಳನ್ನು ಸಂಗ್ರಹಿಸುವುದು.
3. ಜಾಹಿರಾತಿನಲ್ಲಿ ಬರುವ ಎಲ್ಲಾ ಕ್ರೀಮ್‌ಗಳನ್ನು ವಿಚಾರಿಸದೆ ಬಳಸುವುದು.
4. ಯೂ–ಟ್ಯೂಬ್ ನೋಡಿ ಶಾಲಾ ವಾರ್ಷಿಕೋತ್ಸವಕ್ಕೆ ನೃತ್ಯ ಅಭ್ಯಾಸ ಮಾಡುವುದು.
5. ಊಟ ಮಾಡುವ ವೇಳೆ ಟಿ.ವಿ. ನೋಡುವುದು.



**'ದಡದಲ್ಲಿ ನಿಂತು ನೀರಿನತ್ತ ದಿಟ್ಟಿಸಿ ನೋಡಿದ ಮಾತ್ರಕ್ಕೆ ಸಮುದ್ರ ದಾಟಲಾಗದು' – ರವೀಂದ್ರನಾಥ ಟ್ಯಾಗೂರ್**

6. ಯಾವಾಗಲೂ ಫೋನ್‌ನಲ್ಲಿ ಮಾತನಾಡುವುದು.
7. ಜಾಹಿರಾತಿನಲ್ಲಿ ತೋರಿಸುವ ಎಲ್ಲಾ ವಸ್ತುಗಳು ಚೆನ್ನಾಗಿರುತ್ತವೆ.
8. ಹಿರಿಯರ ಅನುಮತಿ ಇಲ್ಲದೆ ಸೈಬರ್ ಸೆಂಟರ್‌ಗೆ ಹೋಗುವುದು.
9. ಮೊಬೈಲ್ನಲ್ಲಿ ಇ–ನ್ಯೂಸ್ ಪೇಪರ್ ಲಭ್ಯವಿರುವಾಗ ಮುದ್ರಿತ ನ್ಯೂಸ್ ಪೇಪರ್ ಓದುವ ಅಗತ್ಯವಿಲ್ಲ.
10. ಅನಾಮಧೇಯ ಕರೆಗಳು ಬಂದಾಗ ಪೋಷಕರ ಬಗ್ಗೆ ಮಾಹಿತಿ ನೀಡುವುದು.

**ವಿಶೇಷ ಸೂಚನೆ :** ಮೊದಲನೆ ಅರ್ಧ ಮೊದಲನೆ ಅರ್ಧ ಘಂಟೆ ಮೇಲಿನ ಚಟುವಟಿಕೆಗಳನ್ನು ಮಾಡಿದ ನಂತರ ಹಿರಿಯ ವಿದ್ಯಾರ್ಥಿಗಳ ತಂಡದ ಕಿರು ನಾಟಕಗಳನ್ನು ಗಮನಿಸುವುದುರ ಮೂಲಕ ಅನುಭವವನ್ನು ಮುಂದಿನ ಅರ್ಧ ಘಂಟೆಗಳಲ್ಲಿ ಅವಧಿಯಲ್ಲಿ ಪಡೆಯುತ್ತಾರೆ.

**ಅವಲೋಕನ :**

**ತರಗತಿ 1–3 :**

## ಬನ್ನಿ ಚಿತ್ರ ಬಿಡಿಸೋಣ !

**(60 ನಿಮಿಷಗಳು)**

1. ನನ್ನ ನೆಚ್ಚಿನ ಕಾರ್ಟೂನ್
2. ಯು–ಟ್ಯೂಬ್ ನಲ್ಲಿ ನೋಡಿದ ನನ್ನ ನೆಚ್ಚಿನ ವಿಡಿಯೋ
3. ನನ್ನ ನೆಚ್ಚಿನ ಆಟ
4. ನನ್ನ ನೆಚ್ಚಿನ ತಾಂತ್ರಿಕ ಸಾಧನ
5. ನನ್ನ ಇಷ್ಟದ ಹಣ್ಣು /ತರಕಾರಿ.



**ನಿರೂಪಕರಿಗೆ /ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ಅಥವಾ ಪ್ರತ್ಯೇಕವಾಗಿ ಕುಳಿತುಕೊಳ್ಳಲು ಹೇಳಿ.
- ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಬಿಳಿ ಹಾಳೆಯನ್ನು ನೀಡಿ.
- ವಿದ್ಯಾರ್ಥಿಗಳಿಗೆ ಅವರು ಬಿಡಿಸಬೇಕಿರುವ ಚಿತ್ರಗಳ ವಿಷಯಗಳ ಬಗ್ಗೆ ತಿಳಿಸಿ.
- ವಿದ್ಯಾರ್ಥಿಗಳು ಚಿತ್ರ ಬಿಡಿಸಿದ ನಂತರ ಅವುಗಳಿಗೆ ಬಣ್ಣದ ಪೆನ್ಸಿಲ್‌ನಿಂದ ಬಣ್ಣ ಹಚ್ಚಲು ತಿಳಿಸಿ.
- ಚಿತ್ರಗಳನ್ನು ಪೂರ್ತಿಗೊಳಿಸಿದ ಮೇಲೆ ಪ್ರತಿ ವಿದ್ಯಾರ್ಥಿಗೆ ಅವರು ಮಾತನಾಡಿದ ಚಿತ್ರದ ಬಗ್ಗೆ ಮಾತನಾಡಲು ತಿಳಿಸಿ.
- ವಿದ್ಯಾರ್ಥಿಗಳು ಅವರ ಚಿತ್ರದ ಬಗ್ಗೆ ಮಾತನಾಡಿದ ಮೇಲೆ ಅವರನ್ನು ಅಭಿನಂದಿಸಿ.

**ಸೂಚನೆ :** ಹಿಂದಿನ ದಿನವೇ ವಿದ್ಯಾರ್ಥಿಗಳಿಗೆ ತಮ್ಮ ಮನೆಯಿಂದ ಬಣ್ಣದ ಪೆನ್ಸಿಲ್ಗಳನ್ನೂ ತರಲು ತಿಳಿಸಿ.

ಅರಿವು :

ತರಗತಿ 4–5 : (60 ನಿಮಿಷಗಳು)

## ನೋಡಿದ್ದು ಸುಳ್ಳಾಗಬಹುದು– ಕೇಳಿದ್ದು ಸುಳ್ಳಾಗಬಹುದು ನಿಧಾನಿಸಿ ಯೋಚಿಸಿದಾಗ ನಿಜವು ತಿಳಿವುದು

**ಮೊಬೈಲ್ ಬಳಕೆ**
ವಿದ್ಯಾರ್ಥಿಗಳು ಮೊಬೈಲ್ ಅನ್ನು ಹೆಚ್ಚಿನ ಸಮಯ ಬಳಸಬಾರದು ಏಕೆ?

**ಟಿ.ವಿ**
ಕಲಿಯಲು ಟಿ.ವಿ. ನೋಡಬೇಕೇ ಹೊರತು ಕೇವಲ ಮನರಂಜನೆಗಾಗಿ ಅಲ್ಲ

**ಸಾಮಾಜಿಕ ಜಾಲತಾಣ**
ಸಾಮಾಜಿಕ ಜಾಲತಾಣದಲ್ಲಿ ಬರುವ ಹೆಚ್ಚಿನ ಮಾಹಿತಿಗಳು ಸತ್ಯವಾಗಿರುವುದಿಲ್ಲ

**ಇಂಟರ್ ನೆಟ್**
ಸಾಮಾಜಿಕ ಜಾಲತಾಣ ಮತ್ತು ಇಂಟರ್‌ನೆಟ್ ಬಹಳ ಜಾಗರೂಕತೆಯಿಂದ ಬಳಕೆ ಮಾಡಬೇಕು

**ಇಲೆಕ್ಟ್ರಾನಿಕ್ ಪರದೆ**
ಇಲಕ್ಟ್ರಾನಿಕ್ಸ್ ಪದರೆಯ ಅತಿಯಾದ ವೀಕ್ಷಣೆ ಕಣ್ಣಿಗೆ ಹಾನಿ ಉಂಟುಮಾಡುತ್ತದೆ.

**ಜಾಹಿರಾತು**
ಮಾಧ್ಯಮದಲ್ಲಿ ನಾವು ನೋಡುವ ಮತ್ತು ಓದುವ ಎಲ್ಲಾ ಜಾಹಿರಾತುಗಳು ನಿಜವಲ್ಲ ಏಕೆ?

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**


- ತರಗತಿಯನ್ನು 5–6 ಗುಂಪುಗಳಾಗಿ ವಿಂಗಡಿಸಿ, ಪ್ರತ್ಯೇಕವಾಗಿ ಕುಳಿತುಕೊಳ್ಳಲು ತಿಳಿಸಿ.
- ಪ್ರತಿಯೊಂದು ಗುಂಪಿಗೆ ಒಂದು ಮಿಂಚುಪಟ್ಟಿಯನ್ನು ನೀಡಿ.
- ವಿದ್ಯಾರ್ಥಿಗಳು ತಮಗೆ ನೀಡಿರುವ ಮಿಂಚುಪಟ್ಟಿಯ ಬಗ್ಗೆ ಚರ್ಚಿಸಲು 5–10 ನಿಮಿಷ ಸಮಯ ನೀಡಿ.
- ಪ್ರತಿಯೊಂದು ಗುಂಪಿಗೆ ಅವರು ಪಡೆದ ಮಿಂಚುಪಟ್ಟಿಗೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ.
- ಆ ಪ್ರಶ್ನೆಗಳಿಗೆ ಗುಂಪಿನ ಸದಸ್ಯರು ಮೊದಲು ಉತ್ತರಿಸಬೇಕು ನಂತರ ಇತರೆ ಗುಂಪಿನ ಸದಸ್ಯರು ಆ ಮಿಂಚುಪಟ್ಟಿಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು.
- ಅನಿಸಿಕೆಗಳನ್ನು ಎಲ್ಲಾ ವಿದ್ಯಾರ್ಥಿಗಳು ಹಂಚಿಕೊಂಡ ನಂತರ ಈ ಕೆಳಗಿನ ರೀತಿಯ ಪ್ರಶ್ನೆಗಳನ್ನು ಕೇಳುವುದರ ಮೂಲಕ ಕಲಿಕೆಯನ್ನು ಸಾರಾಂಶಿಸುವುದು.

**ಪ್ರಶ್ನೆಗಳು :**

- ನೀವು ಮೊಬೈಲ್ ಅನ್ನು ಸಮರ್ಪಕವಾಗಿ ಬಳಸಿಕೊಂಡ ನಿದರ್ಶನಗಳನ್ನು ಹೇಳಿ.
- ಜಾಹಿರಾತಿನ ಬಗ್ಗೆ ಯಾವ ರೀತಿ ಎಚ್ಚರ ವಹಿಸಬೇಕು?
- ಅಂತರ್ಜಾಲದ ದುರ್ಬಳಕೆಯಿಂದ ಆಗುವ ಪರಿಣಾಮಗಳೇನು?
- ಯಾವ ಯಾವ ಸಂದರ್ಭದಲ್ಲಿ ಟಿ.ವಿ ನೋಡುವುದು ಸೂಕ್ತವಲ್ಲ ?

**ಅನುಭವ :**

## ತರಗತಿ 4–5 : ಹಾವು ಮತ್ತು ಏಣಿ ಆಟ ಆಡೋಣವೇ ? ! (30 ನಿಮಿಷಗಳು)




**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

1. ವಿದ್ಯಾರ್ಥಿಗಳನ್ನು ಸನ್ನಿವೇಶಕ್ಕೆ ಅನುಗುಣವಾಗಿ 5–6 ಗುಂಪುಗಳಾಗಿ ವಿಂಗಡಿಸಿ ಪ್ರತ್ಯೇಕವಾಗಿ ಕುಳಿತುಕೊಳ್ಳಲು ತಿಳಿಸಿ.
2. ತಾಂತ್ರಿಕ ಸಾಧನಗಳ ಉಪಯೋಗ ಮತ್ತು ಅತಿಯಾದ ಬಳಕೆಯಿಂದ ಆಗುವ ಪರಿಣಾಮಗಳನ್ನು ಹಾವು ಏಣಿ ಬೋರ್ಡ್ ಮೇಲೆ ಬರೆಯಿರಿ. ಹಾವಿನ ಬಾಯಿ ಕಡೆ ತಂತ್ರಜ್ಞಾನದ ಅತಿಯಾದ ಬಳಕೆಯ ಪರಿಣಾಮಗಳನ್ನು ಮತ್ತು ಏಣಿಯ ತಳಭಾಗದಲ್ಲಿ ತಂತ್ರಜ್ಞಾನದ ಬಳಕೆಯ ಉಪಯೋಗಗಳನ್ನು ಬರೆಯಿರಿ.
3. ಪ್ರತಿಯೊಂದು ಗುಂಪಿಗೆ ಒಂದೊಂದು ಬೋರ್ಡ್ ಮತ್ತು ದಾಳವನ್ನು ನೀಡಿ (ಹುಣಸೆ ಬೀಜಗಳಿಂದ ಮಾಡಿರುವ ದಾಳಗಳನ್ನು ಉಪಯೋಗಿಸಬಹುದು).
4. ವಿದ್ಯಾರ್ಥಿಗಳಿಗೆ ಹಾವು ಏಣಿ ಆಟದ ನಿಯಮಗಳನ್ನು ತಿಳಿಸಿ.
   1) ಈ ಆಟದಲ್ಲಿ ವಿದ್ಯಾರ್ಥಿಗಳ ಕಾಯಿಯು ಏಣಿಯ ಬುಡಕ್ಕೆ ಬಂದಾಗ ಅವರು ಅಲ್ಲಿ ಬರೆದಿರುವ ವಾಕ್ಯವನ್ನು ಜೋರಾಗಿ ತನ್ನ ಗುಂಪಿನ ಸದಸ್ಯರಿಗೆ ಓದಿ ಹೇಳುತ್ತಾರೆ. ನಂತರ ಏಣಿಯನ್ನು ಏರುತ್ತಾರೆ.
   2) ಹಾಗೆಯೇ ವಿದ್ಯಾರ್ಥಿಗಳು ಆಟದಲ್ಲಿ ಒಂದು ವೇಳೆ ಹಾವಿನ ಬಾಯಿಯ ಹತ್ತಿರ ಬಂದಾಗ ಅಲ್ಲಿ ಬರೆದಿರುವ ವಾಕ್ಯವನ್ನು ಜೋರಾಗಿ ಓದಿ ತನ್ನ ಗುಂಪಿನ ಸದಸ್ಯರಿಗೆ ಹೇಳಬೇಕು.
   3) ಹೀಗೆ ಆಟವನ್ನು ವಿದ್ಯಾರ್ಥಿಗಳು ಮುಂದುವರಿಸಿ ಯಾರು ಕೊನೆಯ ಘಟ್ಟವನ್ನು ಮೊದಲು ತಲುಪುತ್ತಾರೋ ಅವರನ್ನು ವಿಜೇತರೆಂದು ಘೋಷಿಸಿ.

**ವಿಶೇಷ ಸೂಚನೆ :** ಮೊದಲ ಅರ್ಧ ಘಂಟೆ ಮೇಲಿನ ಚಟುವಟಿಕೆಗಳನ್ನು ಮಾಡಿದ ನಂತರ ಹಿರಿಯ ವಿದ್ಯಾರ್ಥಿಗಳ ತಂಡದ ಕಿರು ನಾಟಕಗಳನ್ನು ಗಮನಿಸುವುದರ ಮೂಲಕ ಅನುಭವವನ್ನು ಮುಂದಿನ ಅರ್ಧ ಘಂಟೆಗಳಲ್ಲಿ ಅವಧಿಯಲ್ಲಿ ಪಡೆಯುತ್ತಾರೆ.

**ಅವಲೋಕನ/ಪ್ರತಿಫಲನ :**

**ತರಗತಿ 4–5 :** **(60 ನಿಮಿಷಗಳು)**

# ಬನ್ನಿ ಚಿತ್ರ ಬಿಡಿಸೋಣ !

1. ನನ್ನ ನೆಚ್ಚಿನ ಕಾರ್ಟೂನ್ ಪಾತ್ರ.
2. ನಾನು ಹೆಚ್ಚು ಇಷ್ಟಪಡುವ ಟಿ.ವಿ. ಕಾರ್ಯಕ್ರಮ.
3. ನಾನು ಬಳಸುವ ಸಾಮಾಜಿಕ ಜಾಲತಾಣ.
4. ನನ್ನ ಬಿಡುವಿನ ಸಮಯದ ನೆಚ್ಚಿನ ಚಟುವಟಿಕೆ.



**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ಅಥವಾ ಪ್ರತ್ಯೇಕವಾಗಿ ಕುಳಿತುಕೊಳ್ಳಲು ಹೇಳಿ.
- ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಬಿಳಿ ಹಾಳೆಯನ್ನು ನೀಡಿ.
- ವಿದ್ಯಾರ್ಥಿಗಳಿಗೆ ಅವರು ಬಿಡಿಸಬೇಕಿರುವ ಚಿತ್ರಗಳ ವಿಷಯಗಳ ಬಗ್ಗೆ ತಿಳಿಸಿ.
- ವಿದ್ಯಾರ್ಥಿಗಳು ಚಿತ್ರ ಬಿಡಿಸಿದ ನಂತರ ಅವುಗಳಿಗೆ ಬಣ್ಣದ ಪೆನ್ಸಿಲ್ ನಿಂದ ಬಣ್ಣ ಹಚ್ಚಲು ತಿಳಿಸಿ.
- ಪ್ರತಿ ವಿದ್ಯಾರ್ಥಿಗೆ ಅವರು ಬಿಡಿಸಿದ ಚಿತ್ರದ ಬಗ್ಗೆ ಮಾತನಾಡಲು ತಿಳಿಸಿ.
- ವಿದ್ಯಾರ್ಥಿಗಳು ಅವರ ಚಿತ್ರದ ಬಗ್ಗೆ ಮಾತನಾಡಿದ ಮೇಲೆ ಅವರನ್ನು ಅಭಿನಂದಿಸಿ.

**ಸೂಚನೆ :** ಹಿಂದಿನ ದಿನವೇ ವಿದ್ಯಾರ್ಥಿಗಳಿಗೆ ತಮ್ಮ ಮನೆಯಿಂದ ಬಣ್ಣದ ಪೆನ್ಸಿಲ್ ಗಳನ್ನು ತರಲು ತಿಳಿಸಿ.

ಅರಿವು/ತಿಳುವಳಿಕೆ :

ತರಗತಿ 6–8 : (60 ನಿಮಿಷಗಳು)

# ನಮ್ಮ ಜಾಣ್ಮೆಯಲ್ಲಿದೆ ನಮ್ಮ ಸುಂದರ ಜೀವನ

ಮೊಬೈಲ್ ಅನ್ನು ಜಾಣ್ಮೆಯಿಂದ ಬಳಸಿದಾಗ ಅದು ಒಂದು ಉತ್ತಮ ಸಂಪರ್ಕ ಸಾಧನವಾಗುತ್ತದೆ.

ಮಾಧ್ಯಮದಲ್ಲಿ ಕಂಡುಬರುವ ಕೆಲವು ಆಕರ್ಷಕ ಜಾಹಿರಾತುಗಳು ಅಪಾಯಕಾರಿ ಕೂಡ ಆಗಿರುತ್ತವೆ.

ಇನ್‌ಸ್ಟಾಗ್ರಾಂ, ಯೂಟ್ಯೂಬ್, ವಾಟ್ಸಾಪ್, ಟ್ವಿಟರ್, ಫೇಸ್‌ಬುಕ್ ನಂತಹ ಸಾಮಾಜಿಕ ಜಾಲ ತಾಣಗಳ ದುರ್ಬಳಕೆ/ಅತಿಯಾದ ಬಳಕೆ ವೈಯಕ್ತಿಕ ಸ್ವಾಸ್ಥ್ಯಕ್ಕೆ ಹಾನಿಕರ.



ಆಟಗಳನ್ನು ಮೊಬೈಲ್‌ನಲ್ಲಿ ಆಡುವುದಕ್ಕಿಂತ ಮೈದಾನದಲ್ಲಿ ಆಡುವುದು ಉತ್ತಮ.

ಇಂಟರ್‌ನೆಟ್ ಬಳಸುವಾಗ ವಯೋಮಾನಕ್ಕೆ ಅನುಗುಣವಾಗಿ ನಿಯಮ ಪಾಲಿಸಬೇಕು ಏಕೆ?

**ಸೂಚನೆ :** ಈ ಹಂತದಲ್ಲಿ ಮಕ್ಕಳು ತಮ್ಮ ಗುಂಪಿಗೆ ನೀಡಿರುವ ವಿಷಯಾಂಶವನ್ನು ಗುಂಪಿನಲ್ಲಿ ಚರ್ಚಿಸಿ ಮಂಡನೆ ಮಾಡುವರು.

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ತರಗತಿಯನ್ನು 5–6 ಗುಂಪುಗಳಾಗಿ ವಿಂಗಡಿಸಿ ಪ್ರತ್ಯೇಕವಾಗಿ ಕುಳಿತುಕೊಳ್ಳಲು ತಿಳಿಸಿ.
- ಪ್ರತಿ ಗುಂಪಿಗೆ ಒಂದು ವಿಷಯವನ್ನು ನೀಡುವುದು.
- ವಿದ್ಯಾರ್ಥಿಗಳು ತಮಗೆ ನೀಡಿರುವ ವಿಷಯದ ಬಗ್ಗೆ ಚರ್ಚಿಸಲು 5–10 ನಿಮಿಷ ಸಮಯ ನೀಡಿ.
- ಪ್ರತಿ ಗುಂಪಿನ ಎಲ್ಲಾ ಸದಸ್ಯರು ಬಂದು ನಿಂತು ತಮ್ಮ ಚರ್ಚೆಯ ವಿಷಯಗಳನ್ನು ಎಲ್ಲರ ಸಮ್ಮುಖದಲ್ಲಿ ಮಂಡಿಸುವರು.
- ಈ ಸಮಯದಲ್ಲಿ ಬೇರೆ ಗುಂಪಿನ ಸದಸ್ಯರಿಗೆ ಏನಾದರೂ ಪ್ರಶ್ನೆಗಳಿದ್ದಲ್ಲಿ ಕೇಳಿ ಉತ್ತರ ಪಡೆಯಬಹುದು.
- ಪ್ರಶ್ನೆಗಳಿಗೆ ಗುಂಪಿನ ಯಾವ ಸದಸ್ಯರಾದರೂ ಉತ್ತರಿಸಬಹುದು.
- ಪ್ರತಿಯೊಂದು ಗುಂಪಿಗೆ ವಿಷಯಗಳನ್ನು ಮಂಡಿಸಲು ಅವಕಾಶ ನೀಡಿ.
- ಎಲ್ಲಾ ಗುಂಪಿನ ವಿದ್ಯಾರ್ಥಿಗಳು ತಮ್ಮ ವಾದಗಳನ್ನು ಮಂಡಿಸಿದ ನಂತರ ಈ ಕೆಳಗಿನ ರೀತಿಯ ಪ್ರಶ್ನೆಗಳನ್ನು ಕೇಳುವುದರ ಮೂಲಕ ಕಲಿಕೆಯನ್ನು ಸಾರಾಂಶಿಸುವುದು.

**ಪ್ರಶ್ನೆಗಳು :**

- ಮಾರ್ಗದರ್ಶನದೊಂದಿಗೆ ವಿದ್ಯಾರ್ಥಿಗಳು ಇಂಟರ್ ನೆಟ್ ಬಳಸಬೇಕು. ಏಕೆ?
- ಸಾಮಾಜಿಕ ಜಾಲತಾಣದಲ್ಲಿ ಬರುವ ಮಾಹಿತಿಗಳನ್ನು ಪರಿಶೀಲಿಸಿ ನಂತರ ಇತರರೊಂದಿಗೆ ಹಂಚಿಕೊಳ್ಳುವುದು ಉತ್ತಮ ಹವ್ಯಾಸ. ಏಕೆ?
- ಮೊಬೈಲ್ ಅನ್ನು ಯಾವ ಕೆಲಸಕ್ಕೆ ಬಳಸಬೇಕು ಮತ್ತು ಯಾವುದಕ್ಕೆ ಬಳಸಬಾರದು ಏಕೆ?
- ಜಾಹಿರಾತನ್ನು ನೋಡಿಕೊಂಡು ಮೋಸಹೋದ ಘಟನೆಗಳ ಬಗ್ಗೆ ಹೇಳಿ.

ಅನುಭವ :

ತರಗತಿ 6–8 : (60 ನಿಮಿಷಗಳು)


## ನಟಿಸು – ಕಲಿ

6–8 ತರಗತಿಯ ವಿದ್ಯಾರ್ಥಿಗಳು ತಮಗೆ ನೀಡಿರುವ ಸನ್ನಿವೇಶಗಳನ್ನು ಅಭಿನಯ ಮಾಡುವುದರ ಮೂಲಕ ಅನುಭವವನ್ನು ಪಡೆಯುತ್ತಾರೆ .

ಖಾತೆಯ ಹಣ ಖೋತಾ

ಜಾಹೀರಾತಿನ ಪ್ರಮಾದ

ಕಾಣದ ಚಾಟಿಯ ಪೆಟ್ಟು



ಕಣ್ಣಿನ ಸುರಕ್ಷತೆ ಮತ್ತು ಪರದೆ ಸಮಯ

ಆಧುನಿಕ ಕುಟುಂಬದ ಒಂಟಿ ಮಗು

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ತಂಡಗಳಾಗಿ ವಿಂಗಡಿಸಿ.
- ಒಂದೊಂದು ಗುಂಪಿಗೆ ಒಂದು ಸನ್ನಿವೇಷವನ್ನು ನೀಡಿ.
- ಎಲ್ಲಾ ಗುಂಪಿಗೆ ತಯಾರಾಗಲು 10 ನಿಮಿಷ ಸಮಯ ನೀಡಿ.
- ಎಲ್ಲಾ ಗುಂಪುಗಳು ಒಂದೊಂದಾಗಿ ಅಭಿನಯ ಮಾಡಿ ತೋರಿಸಬೇಕು (ಒಂದೊಂದು ಗುಂಪಿಗೆ 10 ನಿಮಿಷ).
- ಕಿರಿಯ ತರಗತಿಯ ವಿದ್ಯಾರ್ಥಿಗಳು ನಾಟಕವನ್ನು ವೀಕ್ಷಣೆ ಮಾಡುವರು.



'ಮಾತಿನ ಬೆಲೆ ತಿಳಿದವರು ಹೃದಯದ ತಕ್ಕಡಿಯಲ್ಲಿ ತೂಗಿ ಅನಂತರ ಬಾಯಿಂದ ಹೊರಗೆ ಹಾಕುತ್ತಾರೆ' – ಸಂತ ಕಬೀರದಾಸ

## ಮಿಂಚುಪಟ್ಟಿಗಳಲ್ಲಿರುವ ಸನ್ನಿವೇಶಗಳು

### 1) ಖಾತೆಯ ಹಣ ಖೋತಾ :

ಅಭಿಷೇಕ ಮನೆಗೆ ಬಂದ ನಂತರ ತನ್ನ ತಂದೆಯ ಮೊಬೈಲ್‌ನಲ್ಲಿ ಆಟವಾಡುವುದು ಅಭ್ಯಾಸವಾಗಿತ್ತು. ಆಟ ಆಡುವಾಗ ಒಂದು ಸಂದೇಶ ಬರುತ್ತದೆ. ಅದರಲ್ಲಿ ನಿಮ್ಮ ಮೊಬೈಲ್ ನಂಬರಿಗೆ ಒಂದು ಕೋಟಿ ರೂಪಾಯಿ ಬಂದಿದೆ ಅದನ್ನು ನಿಮ್ಮ ಖಾತೆಗೆ ಜಮಾ ಮಾಡಲು ಈ ಕೆಳಗಿನ ಮಾಹಿತಿಯನ್ನು ಕೂಡಲೇ ಈ ನಂಬರಿಗೆ ಸಂದೇಶ ಕಳಿಸುವುದು ಎಂದಿತ್ತು. ಆಗ ಅಭಿಷೇಕ ಎಲ್ಲಾ ಮಾಹಿತಿಯನ್ನು ಆ ನಂಬರಿಗೆ ರವಾನಿಸಿದ. ಒಂದು ತಾಸಿನ ನಂತರ ಆ ಮೊಬೈಲ್‌ಗೆ ಸಂದೇಶ ಬರುವುದು. ಅದರಲ್ಲಿ ನಿಮ್ಮ ಖಾತೆಯಿಂದ ಐವತ್ತಾರು ಸಾವಿರ ರೂಪಾಯಿಗಳು ಕಟಾವಣೆಯಾಗಿವೆ ಎಂಬುದಾಗಿರುತ್ತದೆ. ಇದನ್ನು ಓದಿದ ತಂದೆಯು ಆತಂಕದಿಂದ ಬ್ಯಾಂಕಿಗೆ ಕರೆ ಮಾಡಿ ಪರಿಶೀಲನೆ ಮಾಡುತ್ತಾರೆ. ಆಗ ಇದು ಬ್ಯಾಂಕ್ ಖಾತೆಗಳ ಹ್ಯಾಕ್ ಮಾಡುವ ಗುಂಪಿನ ಮೋಸದ ಜಾಲಕ್ಕೆ ತಾವು ಬಲಿಯಾಗಿರುವುದಾಗಿ ತಿಳಿಯುತ್ತದೆ.

### 2) ಜಾಹಿರಾತಿನ ಪ್ರಮಾದ :

ಕೃಪಾ ದೂರದರ್ಶನದ ಒಂದು ಜಾಹೀರಾತನ್ನು ನೋಡಿ ಹೊಸ ಕ್ರೀಮನ್ನು ಖರೀದಿಸುತ್ತಾಳೆ. ಮರುದಿನ ಶಾಲೆಗೆ ಬಂದಿರುವುದಿಲ್ಲ. ಏಕೆಂದು ಶಿಕ್ಷಕರು ಪ್ರಶ್ನಿಸಿದಾಗ ಆಕೆಯ ಗೆಳತಿಯೊಬ್ಬಳು ಹೊಸ ಕ್ರೀಮನ್ನು ಮುಖಕ್ಕೆ ಹಚಿದ್ದಾಗ ಮುಖವು ಸುಟ್ಟಂತೆ ಆಗಿದೆ ಎಂದು ಶಿಕ್ಷಕರಿಗೆ ತಿಳಿಸುತ್ತಾಳೆ. ಇದರಿಂದ ಆ ತರಗತಿಯ ಮಕ್ಕಳೆಲ್ಲರೂ ಇನ್ನು ಮುಂದೆ ಜಾಹೀರಾತುಗಳಲ್ಲಿ ಹೇಳುವ ಮಾತುಗಳನ್ನು ಯಾವುದೇ ದಾಖಲೆಗಳಿಲ್ಲದೆ ಅಥವಾ ಪರಿಶೀಲಿಸದೆ ನಂಬಬಾರದೆಂಬ ನಿರ್ಧಾರಕ್ಕೆ ಬರುತ್ತಾರೆ.

### 3) ಆಧುನಿಕ ಕುಟುಂಬದ ಒಂಟಿ ಮಗು :

ತರಗತಿಯಲ್ಲಿ ಮನೋಜನಿಗೆ ಶಿಕ್ಷಕರು ಜೇನುಹುಳುವಿನ ಜೀವನದ ಬಗ್ಗೆ ಸವಿವರವಾಗಿ ಟಿಪ್ಪಣಿ ಬರೆದು ತರುವ ಕೆಲಸ ನೀಡುತ್ತಾರೆ. ಅವನು ಮನೆಗೆ ಬಂದಾಗ ಆ ವಿಷಯದ ಬಗ್ಗೆ ಸಾಕಷ್ಟು ತಿಳಿದಿದ್ದರೂ ಬರೆಯಲು ಬಾರದೆ ಚಿಂತಿಸುತ್ತಾ ಕುಳಿತಿರುತ್ತಾನೆ. ಆಗ ತಂದೆಯು ಮನೆಗೆ ಬಂದ ತಕ್ಷಣ ತನಗೆ ಸಹಾಯ ಮಾಡುವಂತೆ ಕೇಳುತ್ತಾನೆ. ಆಗ ತಂದೆಯು ತನಗೆ ತುಂಬಾ ಕೆಲಸವಿದೆ ಎಂದು ಹೇಳಿ ಲ್ಯಾಪ್‌ಟಾಪ್ ತೆಗೆದು ಕೂರುವರು ಮತ್ತು ಅಮ್ಮನ ಬಳಿ ಕೇಳೆಂದು ಹೇಳುವರು. ನಂತರ ತಾಯಿಯನ್ನು ಕೇಳಿದಾಗ ಆಕೆ ಅಡುಗೆ ಮಾಡುತಿರ್ರುವುದಾಗಿ ಮತ್ತು ಅಜ್ಜಿ ಬಳಿ ಹೋಗು ಎಂದು ಹೇಳುವರು. ಅಜ್ಜಿ ಬಳಿ ಬಂದು ಅವನು ತನ್ನ ಸಮಸ್ಯೆ ತಿಳಿಸುವನು.ಆಗ ಅಜ್ಜಿ ಈ ಧಾರಾವಾಹಿ ಮುಗಿಯಲಿ ಕಂದಾ, ನಿನಗೆ ತಡವಾದರೆ ಅಜ್ಜನ ಸಹಾಯ ಪಡೆ ಎಂದು ಹೇಳುತ್ತಾರೆ.ಅಜ್ಜನ ಕೋಣೆಗೆ ಹೋಗಿ ನೋಡಿದರೆ ಅವರು ಮೊಬೈಲ್‌ನಲ್ಲಿ ಮಾತನಾಡುತ್ತಿರುತ್ತಾರೆ. ಇದನ್ನು ಗಮನಿಸಿ ಹಿಂದಿರುಗಿ ಬಂದು ಬೇಸರದಿಂದ ಮಲಗುವನು. ಮಾರನೇ ದಿನ ಶಾಲೆಗೆ ತಯಾರಾಗಿ ಶಾಲೆಗೆ ಹೋಗದೆ ದಾರಿಯಲ್ಲಿರುವ ಪಾರ್ಕಿನಲ್ಲಿ ಒಂಟಿಯಾಗಿ ಕುಳಿತಿರುತ್ತಾನೆ. ಇದನ್ನು ಗಮನಿಸಿದ ಮಾಲಿಯು ಆ ಹುಡುಗನನ್ನು ಮಾತನಾಡಿಸಿ ಶಾಲೆಗೆ ಕರೆದೊಯ್ಯುವನು. ಆಗ ಶಿಕ್ಷಕರು ಮನೋಜನ ಪೋಷಕರನ್ನು ಕರೆಸಿ ಅವರು ಉಪಯೋಗಿಸುತ್ತಿರುವ ಇಲೆಕ್ಟ್ರಾನಿಕ್ ಸಾಧನಗಳಿಂದ ಅವರ ಕುಟುಂಬದಲ್ಲಿ ಉಂಟಾಗಿರುವ ಸಾಮರಸ್ಯದ ಕೊರತೆ ಮತ್ತು ಆ ಮಗುವಿಗೆ ನೀಡಬೇಕಾದ ಕಾಳಜಿ ಮತ್ತು ಅಮೂಲ್ಯವಾದ ಸಮಯದ ಪ್ರಾಮುಖ್ಯತೆಯನ್ನು ತಿಳಿಸುವರು.

## 4) ಕಾಣದ ಚಾಟಿಯ ಪೆಟ್ಟು :

ಸಂಧ್ಯಾ 16 ವರ್ಷದ ಬಾಲಕಿ. ಆಕೆಯ ಶಾಲಾ ವಾರ್ಷಿಕೋತ್ಸವದ ಕಾರ್ಯಕ್ರಮದಲ್ಲಿ ಅವಳಿಗೆ ಗೊತ್ತಿಲ್ಲದೆ ಯಾರೋ ತೆಗೆದ ಫೋಟೊವನ್ನು ಮತ್ತೊಬ್ಬರು ಫೇಸ್‌ಬುಕ್‌ನಲ್ಲಿ ಹಾಕಿರುತ್ತಾರೆ. ಈ ಸುದ್ದಿಯನ್ನು ಸ್ನೇಹಿತೆಯಿಂದ ತಿಳಿದ ಸಂಧ್ಯಾ ಮನೆಯಲ್ಲಿ ಗೊತ್ತಾದರೆ ಏನು ಅನಾಹುತವಾಗುವುದೋ ಎಂದು ಯೋಚಿಸಲು ಆರಂಭಿಸುತ್ತಾಳೆ. ದಿನ ಕಳೆದಂತೆ ಮಾನಸಿಕವಾಗಿ ಕುಗ್ಗಿ ಹೋಗುತ್ತಾಳೆ. ಸದಾ ಲವಲವಿಕೆಯಿಂದಿದ್ದ ಅವಳು ಮೌನವಾಗುತ್ತಾಳೆ ಹಾಗೂ ಮಾನಸಿಕ ಖಿನ್ನತೆಗೆ ಒಳಗಾಗುತ್ತಾಳೆ. ವಿದ್ಯಾಭ್ಯಾಸದಲ್ಲೂ ಹಿಂದುಳಿಯುವಳು. ಇದರಿಂದ ಗಾಬರಿಗೊಂಡ ಪೋಷಕರು ಎಷ್ಟು ಕೇಳಿದರೂ ತನ್ನ ಸಮಸ್ಯೆ ಹೇಳಿಕೊಳ್ಳುವುದಿಲ್ಲ. ನಂತರ ಅವಳನ್ನು ಮನಃಶಾಸ್ತ್ರಜ್ಞರ ಬಳಿ ಕರೆದುಕೊಂಡು ಹೋಗುತ್ತಾರೆ. ಆಗ ಅವರು ಆ ಮಗುವನ್ನು ಮಾತನಾಡಿಸಿ ಆಕೆಯ ಮನಸ್ಸಿನಲ್ಲಿನ ಖಿನ್ನತೆಗೆ ಕಾರಣವನ್ನು ಪತ್ತೆಹಚ್ಚಿ ಆಕೆಗೆ ಧೈರ್ಯವನ್ನು ತುಂಬುವರು; ಆ ಕೆಲಸ ಮಾಡಿದ ವ್ಯಕ್ತಿಯನ್ನು ಕರೆಸಿ ಆತನ ತಪ್ಪನ್ನು ಆತನಿಗೆ ಅರ್ಥ ಮಾಡಿಸುವರು ಮತ್ತು ಹೀಗೆ ಮಾಡುವುದರಿಂದ ನ್ಯಾಯಾಲಯದ ಮೆಟ್ಟಿಲೇರಿದರೆ ಆತನಿಗೆ ಶಿಕ್ಷೆಯೂ ಸಹ ಕೊಡಿಸಬಹುದಾಗಿದೆ ಎಂದು ಮನವರಿಕೆ ಮಾಡಿಕೊಡುವರು.

## 5) ಕಣ್ಣಿನ ಸುರಕ್ಷತೆ & ಪರದೆ ಸಮಯ :

ಅಭಿನವ್ 2ನೇ ತರಗತಿ ವಿದ್ಯಾರ್ಥಿ. ನಾಲ್ಕನೇ ಬೆಂಚಿನಲ್ಲಿ ಕುಳಿತಿದ್ದರೂ ಕಪ್ಪುಹಲಗೆಯ ಮೇಲೆ ಬರೆದಿರುವ ಅಕ್ಷರಗಳು ಕಾಣಿಸುವುದಿಲ್ಲವೆಂದು ತರಗತಿ ಶಿಕ್ಷಕರಿಗೆ ತಿಳಿಸುತ್ತಾ ತನ್ನನ್ನು ಮುಂದಿನ ಬೆಂಚಿನಲ್ಲಿ ಕೂರಿಸುವಂತೆ ಕೇಳಿಕೊಳ್ಳುತ್ತಾನೆ. ಅದಕ್ಕೆ ಶಿಕ್ಷಕರು ಅಭಿನವ್‌ನ ತಂದೆ–ತಾಯಿಯನ್ನು ಕರೆಸಿ ಅವನಿಗೆ ಕಣ್ಣಿನ ಪರೀಕ್ಷೆ ಮಾಡಿಸುವಂತೆ ತಿಳಿಸುತ್ತಾರೆ. ಅದಕ್ಕೆ ಅವರು ಅಭಿನವ್‌ನನ್ನು ನೇತ್ರ ತಜ್ಞರ ಬಳಿ ಕರೆದುಕೊಂಡು ಹೋಗುತ್ತಾರೆ. ಅದಕ್ಕೆ ವೈದ್ಯರು ಪರೀಕ್ಷೆ ಮಾಡಿ ಒಂದು ಕನ್ನಡಕ ನೀಡಿ ಆತನಿಗೆ ಹತ್ತಿರದಿಂದ ದೂರದರ್ಶನ ವೀಕ್ಷಿಸಬಾರದು ಮತ್ತು ಕತ್ತಲೆಯಲ್ಲಿ ಮೊಬೈಲ್‌ಅನ್ನು ಹೆಚುಕ್ಕಾಲ ವೀಕ್ಷಣೆ ಮಾಡಿದ್ದರಿಂದ ಹೀಗಾಗಿದೆ ಎಂದು ತಿಳಿಸುವರು. ಅಲ್ಲದೆ ಇನ್ನು ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸಬೇಕೆಂದು ತಿಳಿಸುತ್ತಾರೆ.

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಎಲ್ಲಾ ವಿದ್ಯಾರ್ಥಿಗಳನ್ನು ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ತಿಳಿಸಿ.
- ಮೊದಲು ಅವರು ವೀಕ್ಷಿಸಿದ ನಾಟಕಗಳ ಬಗ್ಗೆ ಏನನ್ನು ಕಲಿತರು ಎಂಬುದನ್ನು ತಿಳಿಯಲು ಪ್ರಶ್ನೆಗಳನ್ನು ಕೇಳಿ.
- ಯಾರಾದರೂ ಉತ್ತರಿಸಿದಾಗ ಅದನ್ನು ಮತ್ತೊಮ್ಮೆ ಕೇಳುವಂತೆ ಪುನರಾವರ್ತಿಸಿ ಹೇಳಿ.
- ಇದೇ ರೀತಿ ಎಲ್ಲಾ ಸನ್ನಿವೇಷಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಮತ್ತು ಎಲ್ಲರಿಗೂ ಅವರು ಈ ಎರಡು ಅವಧಿಯಲ್ಲಿ ಕಲಿತ ವಿಷಯಗಳನ್ನು ಮನನ ಮಾಡಿಕೊಳ್ಳಲು ಸಹಕರಿಸಿ.

**ಪ್ರಶ್ನೆಗಳು :**

1. ನೀವು ನೋಡಿದ ನಾಟಕಗಳು ಯಾವ ಸಂದೇಶಗಳನ್ನು ತಿಳಿಸುತ್ತವೆ?
2. ಈ ನಾಟಕಗಳಲ್ಲಿ ಅಂತರ್ಜಾಲ ಮತ್ತು ಮೊಬೈಲ್‌ಫೋನ್‌ಗಳ ಬಳಕೆಯಲ್ಲಿ ಕಂಡು ಬಂದ ಋಣಾತ್ಮಕ ಪರಿಣಾಮ ತಿಳಿಸಿ.
3. ನಾವು ಯಾವ ಸಂದರ್ಭದಲ್ಲಿ ಮೊಬೈಲ್ ಫೋನ್‌ಗಳನ್ನು ಬಳಸಬಾರದು?
4. ಈ ನಾಟಕಗಳಲ್ಲಿ ಕಾಣುವ ತಂತ್ರಜ್ಞಾನದ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳಾವುವು?

ಅವಲೋಕನ :

ತರಗತಿ 6–8 : (60 ನಿಮಿಷಗಳು)

# ಆ ಸಂದರ್ಭದಲ್ಲಿ ನಾನಿದ್ದರೆ !!!

ರಾಣಿಗೆ ಒಂದು ಲ್ಯಾಂಡ್‌ಲೈನ್ ಕರೆ ಬರುತ್ತದೆ. ಅವರು ನಮ್ಮ ಕಂಪನಿಯಿಂದ ತಮಗೆ ಉಚಿತ ಉಡುಗೊರೆ ನೀಡುವುದಾಗಿ ಹೇಳಿ ಅದನ್ನು ತಂದು ಕೊಡಲು ತಮ್ಮ ಮನೆಯಲ್ಲಿ ಹಿರಿಯರು ಲಭ್ಯವಿರುವ ಸಮಯ ತಿಳಿಸಲು ಹೇಳುತ್ತಾರೆ.

- ನೀವು ರಾಣಿಯ ಸ್ಥಾನದಲ್ಲಿದ್ದರೆ ಏನು ಮಾಡುವಿರಿ?
- ಈ ಒಂದು ಸಂದರ್ಭ ನಿಮಗೆ ಸುರಕ್ಷಿತವೋ ಅಲ್ಲವೋ?

ರಾಮುವಿನ ಗೆಳೆಯ ಸುರೇಶ ವಿದೇಶದಲ್ಲಿ ತನ್ನ ಸಾಮಾನುಗಳನ್ನು ಕಳೆದುಕೊಂಡಿರುತ್ತಾನೆ. ಹಾಗಾಗಿ ಅವನಿಗೆ ಸಹಾಯ ಮಾಡಲು ಅವನ ಸ್ನೇಹಿತ ಸುರೇಶನು ತನ್ನ ಖಾತೆಗೆ 50,000 ರೂಪಾಯಿಗಳನ್ನು ಜಮಾ ಮಾಡುವಂತೆ ತಿಳಿಸುತ್ತಾನೆ ಮತ್ತು ಭಾರತಕ್ಕೆ ಹಿಂದಿರುಗಿದ ಮೇಲೆ ಅವನು ವಾಪಸ್ ನೀಡುತ್ತಾನೆಂದು ತಿಳಿಸುತ್ತಾನೆ.

- ನೀನು ರಾಮು ಆಗಿದ್ದರೆ ಏನು ಮಾಡುವೆ?
- ಈ ಸಂದರ್ಭ ನಿಮಗೆ ಸುರಕ್ಷಿತವೋ? ಅಲ್ಲವೋ?

ರಾಧಾಳ ಕುಟುಂಬದ ಸದಸ್ಯರು ಟಿ.ವಿ. ನೋಡುತ್ತಾ ಕುಳಿತ್ತಿದ್ದರು. ಆಗ ಅವರ ಮನೆಗೆ ಅನಿರೀಕ್ಷಿತವಾಗಿ ಒಬ್ಬ ಅತಿಥಿ ಬರುತ್ತಾರೆ. ಇದನ್ನು ಅವರಾರು ಗಮನಿಸುವುದಿಲ್ಲ, ಮತ್ತು ಗಮನಿಸಿದ ನಂತರವೂ ಅವರು ಸರಿಯಾಗಿ ಅತಿಥಿಯನ್ನು ಮಾತನಾಡಿಸುವುದಿಲ್ಲ, ಎಲ್ಲರೂ ತಮ್ಮದೇ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ.

- ರಾಧಾ ಮತ್ತು ಅವಳ ಕುಟುಂಬದ ವರ್ತನೆ ಸರಿಯೇ?
- ನೀವು ಟಿ.ವಿ ನೋಡುವಾಗ ಯಾರಾದರೂ ಮನೆಗೆ ಬಂದರೆ ಏನು ಮಾಡುವಿರಿ?
- ಒಂದು ವೇಳೆ ನೀವೇ ಅತಿಥಿ ಆಗಿದ್ದರೆ ನಿಮ್ಮ ಮನಸ್ಸಿಗೆ ಹೇಗೆ ಅನಿಸುತ್ತಿತ್ತು?

ಸಾವಿತ್ರಿಯು ಆನ್‌ಲೈನ್‌ನಲ್ಲಿ ಒಂದು ಕೊಂಡರೆ ಒಂದು ಉಚಿತ ಎಂಬ ಜಾಹಿರಾತು ನೋಡಿ ಆಸೆಯಿಂದ ಬಟ್ಟೆಗಳನ್ನು ಆರ್ಡರ್ ಮಾಡುತ್ತಾಳೆ. ಅವಳು ಪಾರ್ಸೆಲ್ ಬಂದಾಗ ಅದನ್ನು ತೆಗೆದು ನೋಡಿದಾಗ ಅವಳು ಆರ್ಡರ್ ಮಾಡಿದ ಬಣ್ಣದ ಬದಲು ಬೇರೆ ಬಣ್ಣದ ಬಟ್ಟೆ ಬಂದಿರುತ್ತದೆ ಮತ್ತು ಆ ಬಟ್ಟೆಯ ಗುಣಮಟ್ಟ ಬಹಳ ಕಳಪೆಯಾಗಿರುತ್ತದೆ.

* ನಿಮ್ಮ ಪ್ರಕಾರ ಸಾವಿತ್ರಿಯು ಬಟ್ಟೆಕೊಂಡ ಮಾರ್ಗ ಸರಿಯೇ?
* ನೀವು ಸಾವಿತ್ರಿಯ ಸ್ಥಾನದಲ್ಲಿದ್ದರೆ ಹೇಗೆ ಪ್ರತಿಕ್ರಿಯೆ ನೀಡುತ್ತಿದ್ದಿರಿ?
* ನೀವು ಹೀಗೆ ಜಾಹಿರಾತಿನಿಂದ ಮೋಸ ಹೋದ ಘಟನೆಗಳ ಬಗ್ಗೆ ಕೇಳಿದ್ದೀರಾ?

ವಿಜಯ್ ತನ್ನ ತಂದೆಯ ಮೊಬೈಲ್‌ಗೆ ಬಂದ "ನಾಳೆ ಶಾಲೆ ಮತ್ತು ಕಾಲೇಜಿಗೆ ರಜ" ಎಂಬ ಸಂದೇಶವನ್ನು ಎಲ್ಲಾ ಸ್ನೇಹಿತರಿಗೆ ಕಳಿಸುವನು, ನಂತರ ಮಾರನೇ ದಿನ ಅದು ಸುಳ್ಳು ಸುದ್ದಿಯೆಂದು ತಿಳಿದು ಮುಜುಗರಕ್ಕೆ ಒಳಗಾಗುವನು.

* ಅಂತಹ ಸಂದೇಶವನ್ನು ನೋಡಿದಾಗ ನೀವು ರಾಮುವಿನ ಸ್ಥಾನದಲ್ಲಿದ್ದರೆ ಏನು ಮಾಡುತ್ತಿದ್ದಿರಿ?
* ನೀವು ಎಂದಾದರೂ ಈ ರೀತಿ ಮುಜುಗರಕ್ಕೆ ಒಳಗಾಗಿದ್ದೀರಾ? ಏಕೆ?

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ತರಗತಿಯನ್ನು 5–6 ಗುಂಪುಗಳಾಗಿ ವಿಂಗಡಿಸಿ ಪ್ರತ್ಯೇಕವಾಗಿ ಕುಳಿತುಕೊಳ್ಳಲು ತಿಳಿಸಿ.
- ಪ್ರತಿಯೊಂದು ಗುಂಪಿಗೆ ಒಂದು ಸನ್ನಿವೇಶವನ್ನು ನೀಡಿ.
- ವಿದ್ಯಾರ್ಥಿಗಳು ತಮಗೆ ನೀಡಿರುವ ಸನ್ನಿವೇಶದ ಬಗ್ಗೆ ಚರ್ಚಿಸಲು 5–10 ನಿಮಿಷ ಸಮಯ ನೀಡಿ.
- ವಿದ್ಯಾರ್ಥಿಗಳು ಚರ್ಚಿಸಿದ ನಂತರ ಪ್ರತಿ ಗುಂಪಿಗೆ ಪ್ರತಿ ಸಂದರ್ಭಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ಕೇಳಿ.
- ಅವರು ನೀಡಿದ ಉತ್ತರಗಳ ಬಗ್ಗೆ ಇತರೆ ಗುಂಪಿನ ಸದಸ್ಯರು ಕೂಡ ತಮ್ಮ ಅನಿಸಿಕೆಗಳನ್ನು ಹೇಳಬಹುದು.

ಅಥವಾ

ತರಗತಿ 6–8 : (60 ನಿಮಿಷಗಳು)

# ನೀ ನನ್ನ ಗೆಲ್ಲಲಾರೆ !!!!!



**ಚರ್ಚೆಯ ವಿಷಯಗಳು :**

- ಮೊಬೈಲ್ ಬಂತು ಮನೆಯಲ್ಲಿ ಮಾತು ಹೋಯ್ತು
- ಕಂಪ್ಯೂಟರ್ ಬಳಕೆಯಿಂದ ಮನಸ್ಸಿನ ಅರೋಗ್ಯ ಹಾಳಾಗುತ್ತದೆ.
- ತಂತ್ರಜ್ಞಾನ ಬಳಕೆಯಿಂದ ಜನರು ಸೋಮಾರಿಗಳಾಗುತ್ತಾರೆ
- ಮಾಧ್ಯಮಗಳು ನಮ್ಮನ್ನು ದಾರಿ ತಪ್ಪಿಸುತ್ತವೆ, ಸರಿಯೇ?

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ಒಂದು ಗುಂಪಿನಲ್ಲಿ 6–7 ಮಕ್ಕಳಿರುವಂತೆ ಲಿಂಗಸಮಾನತೆ ಇರುವಂತೆ 4 ಗುಂಪುಗಳನ್ನು ರಚಿಸುವುದು.
- ಮೈದಾನ ಅಥವಾ ಸ್ಟೇಜ್ ಮೇಲೆ ಎರಡು ಚೌಕಗಳನ್ನು ಹಾಕುವುದು ಒಂದರಲ್ಲಿ "ಪರ" ಎಂದು ಮತ್ತೊಂದರಲ್ಲಿ "ವಿರೋಧ" ಬರೆಯುವುದು.
- ಒಂದೊಂದೇ ಗುಂಪನ್ನು ಕರೆದು ಚರ್ಚೆಯ ವಿಷಯ ಹೇಳುವುದು ಮತ್ತು ಮಕ್ಕಳಿಗೆ "ಪರ" ಅಥವಾ "ವಿರೋಧ" ಆಯ್ಕೆಮಾಡಿಕೊಳ್ಳಲು ತಿಳಿಸುವುದು,
- ತಮ್ಮ ಆಯ್ಕೆಯ ಬಗ್ಗೆ ಅಂದರೆ ವಿಷಯದ ಪರ ಅಥವಾ ವಿರೋಧದ ಬಗ್ಗೆ ಚರ್ಚಿಸಲು 10 ನಿಮಿಷ ಕಾಲಾವಕಾಶ ನೀಡುವುದು.
- ಇದೇ ರೀತಿ ಎಲ್ಲಾ ಗುಂಪುಗಳಿಗೆ ಅವಕಾಶ ನೀಡುವುದು.



## ಪ್ರತಿಜ್ಞೆ

ಎಲ್ಲಾ ತರಗತಿಯ ಮಕ್ಕಳನ್ನು ಒಟ್ಟಾಗಿ ಸೇರಿಸಿ ಕೆಳಗಿನ ಪ್ರತಿಜ್ಞೆಯನ್ನು ಮಾಡಿಸುವುದು.

1) ನಾವು ಅಂತರ್ಜಾಲ, ಮೊಬೈಲ್ ಇತರೆ ಸಾಧನಗಳನ್ನು ಸುರಕ್ಷಿತವಾಗಿ ಮತ್ತು ಜವಾಬ್ದಾರಿಯುತವಾಗಿ ನಮ್ಮ ಕುಟುಂಬದ ಸಾಮರಸ್ಯಕ್ಕೆ ಧಕ್ಕೆ ಬಾರದಂತೆ ನಿಯಂತ್ರಿತವಾಗಿ ಬಳಕೆ ಮಾಡುತ್ತೇವೆ.

2) ದೂರದರ್ಶನ, ಅಂತರ್ಜಾಲ ಮತ್ತು ಇತರೆ ಮಾಧ್ಯಮದಲ್ಲಿ ದೊರಕುವ ಮಾಹಿತಿಯನ್ನು ಅದರಲ್ಲೂ ಜಾಹೀರಾತನ್ನು ಪರೀಕ್ಷಿಸಿ ಮತ್ತು ನಂಬಿಕಸ್ಥ ಮೂಲಗಳಿಂದ ದೃಢೀಕರಿಸಿಕೊಂಡು ಒಳ್ಳೆಯ ಗುಣಮಟ್ಟದ ವಸ್ತುಗಳ ಆಯ್ಕೆ ಮಾಡಿಕೊಳ್ಳುತ್ತೇವೆ ಮತ್ತು ಇದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

3) ಈ ಅಂತರ್ಜಾಲ ಮತ್ತು ಮೊಬೈಲ್‌ಫೋನ್‌ಗಳ ಅತಿಯಾದ ಬಳಕೆಯಿಂದ ಉಂಟಾಗುವ ಮಾನಸಿಕ ಮತ್ತು ದೈಹಿಕ ಅಸ್ವಸ್ಥದ ಬಗ್ಗೆ ಅರಿವನ್ನು ಹೊಂದುವುದು ನಮ್ಮ ಜವಾಬ್ದಾರಿಯಾಗಿದ್ದು ಇವುಗಳನ್ನು ಅಗತ್ಯವಿದ್ದಾಗ ಬಳಕೆ ಮಾಡುತ್ತೇವೆ.

4) ಬೇರೆಯವರ ಮಾಹಿತಿ ಅಥವಾ ಫೋಟೊವನ್ನು ಅವರ ಪೂರ್ವಾನುಮತಿ ಇಲ್ಲದೆ ಉಪಯೋಗಿಸುವುದಿಲ್ಲ ಅಥವಾ ಸಂದೇಶ ರವಾನೆ ಮಾಡುವುದಿಲ್ಲ.

### ಸಲಹಾತ್ಮಕ ಚಟುವಟಿಕೆಗಳು

1) ನಿಮ್ಮ ಶಾಲಾ ಪರಿಸರದಲ್ಲಿ ಬಳಸುವ ತಂತ್ರಜ್ಞಾನ ಸಾಧನಗಳನ್ನು ಗುರುತಿಸಿ ಅದನ್ನು ಬಳಸುವ ವಿಧಾನ ತಿಳಿಯಿರಿ.

2) ನೀವು ಎಂದಾದರೂ ಮೊಬೈಲ್‌ನಲ್ಲಿ ಕೇರಂ/ಫುಟ್‌ಬಾಲ್ ಆಟ ಆಡಿರುವಿರೇ? ಹಾಗಾದರೆ ಇದೇ ಆಟವನ್ನು ಮೈದಾನದಲ್ಲಿ ಆಡುವ ಮತ್ತು ಮೊಬೈಲ್‌ನಲ್ಲಿ ಆಡುವುದರ ನಡುವಿನ ವ್ಯತ್ಯಾಸವೇನು? ಚರ್ಚಿಸಿ.

3) ನಮ್ಮ ನಿತ್ಯ ಜೀವನದಲ್ಲಿ ಕಂಡು ಬರುವ ಜಾಹೀರಾತುಗಳನ್ನು ಸೂಕ್ತ ಮೂಲಗಳಿಂದ ಪರೀಕ್ಷಿಸದೇ ಉಪಯೋಗಿಸುವುದೇ ಸರಿಯಲ್ಲ ಎಂಬುದನ್ನು ಜಾಥಾ ಮೂಲಕ ನಿಮ್ಮ ಊರಿನ ಜನಕ್ಕೆ ಅರಿವು ಮೂಡಿಸಿ.

4) ಆಧುನಿಕ ತಂತ್ರಜ್ಞಾನ ಸಾಧನಗಳ ಮತ್ತು ಅಂತರ್ಜಾಲದ ಅಸುರಕ್ಷಿತ ಬಳಕೆಯಿಂದ ಉಂಟಾಗುವ ತೊಂದರೆಗಳ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಗಳ ಪೇಪರ್ ಕಟಿಂಗ್‌ಗಳನ್ನು ಸಂಗ್ರಹಿಸಿ ಶಾಲೆಯಲ್ಲಿ ಪ್ರದರ್ಶಿಸಿ.